ದುರುಗನು, ಗುರುತಿಡಿಯೋ ಊರಿನ ಜೀವಂತ ಹಳೆಯ ಪಳಿಯುಳಿಕೆ ಅದು 'ಬಾವಿ ಸಂಗಮ್ಮ' ಅಂಬುದೇ ಆಗಿತ್ತು. ಸದಾ ಮಣ್ಣಿನ ಪದುವಾಡುತ್ತಲೇ ಬದುಕನ್ನು ನಿರುಕಿಸುತ್ತಿದ್ದ ಸಂಗಮ್ಮಳ ಜೀವಗಾಥೆಯು ಅದು ಪದಪದುಕೂ ಮೀರಿದ್ದಾಗಿತ್ತು.

ಸುಮ್ಮನೇ ಆ ಊರ ಹಿರಿಕುರ ವಯಸ್ಸು ಕೇಳುತ್ತ, ಲೆಕ್ಕಾ ಹಾಕಿದರೆ ಸಂಗಮ್ಮಳದು ಅವುಳ ವಸುಡಿನ ಹುಳುಕು ಹಲ್ಲಿನನುಸಾರ ಅದ್ಮಾಸು ಎಂಬತ್ತೇಳೋ, ಎಂಬತ್ತಂಟೋ ಆಗುತ್ತಿತ್ತು. ಸಂಗಮ್ಮ ಅವುಳ ತಾಯಿಯ ತೊಗುಲು ಬಿಡುಸಿಕೊಂಡು ಇಯಾಂವು... ಇಯಾಂವು... ಅಂದಿದ್ದ ದಿವುಸದಿಂದ ಹಿಡುದ ಹತ್ತಿಪ್ಪತ್ತು ವರ್ಷದ ಮ್ಯಾಲೆ ಅಲ್ಲಿಗೆ ಸಾಲೆಂಬುದು ಶುರುವಾತು ಅಂದರೆ ಅವುಳಿಗೆ ಸಾಲಿಯ ದರುಶನ ಆಗಿಲ್ಲವೆಂದೇ ಅರ್ಥ.

ಎದುರಾದ ಯಾರಾದರೂ, 'ಸಾಲಿ ಕಲ್ತಿ ಅನ್ಬೇ ಸಂಗಮ್ಮ' ಅಂತಂದಾಗ 'ಅದೇದ್ಕ ಬೇಕಪಾ ಕಿರುಕಸಾಲಿ' ಎಂದೇ ಸಂಗಮ್ಮ ಗೊಳ್ಳೆಂದು ನಗೆಯಾಡುತ್ತಿತ್ತು. ಕುಣಿಸೇರೋ ಈ ಹೊತ್ತಿನಲ್ಲೂ, ಸುಮ್ಮನೆ ಯಾರಾದರೂ 'ನಿಂಗಾ ವಯಸ್ಸೇನ್ಬೇ ಸಂಗಮ್ಮ' ಎಂದರೆ ಬರಾಬ್ಬರಿ ಮೂವತ್ತು ವರ್ಷ... 'ಒಂದ್ಮೂವತ್ತ, ನಾಲ್ವತ್ತು ಬರ್ಬಹುದೆಪ್ಪಾ' ಅಂತಲೇ ಅಂತಿತ್ತು ಸಂಗಮ್ಮ.

ಎಲುಬುದೊಗಲಲ್ಲೇ ತೆಳ್ಳುಗೆ ಹೊಳೆವ ಕಂಗುಳು. ಊರ ಜಿವುನಪ್ಪನ ಗಿಡ್ಡೆತ್ತಿನ ಮೈ ಹೋಲುವ ಹಂಡು-ಬಂಡು ಬಣ್ಣದ ಒಡುಕು ಗುಂಡಿಯ ಜಂಪರು. ಪಾದುದಿಂದ ಹಣೆವರೆಗೂ; ತುದಿಬೆರುಳಿನಿಂದ-ಕಿವಿವರೆಗೂ ಸುಕ್ಕು ಗಟ್ಟಿದ ಮೈದೊಗಲು, ಹಳುಸು ಹಲ್ಲುಗಳು, ತುಸು ಬಾಗಿದ ನಡ.. ಇಷ್ಟು ಸಾಕಾಗಿ ಬಿಡುತ್ತಿತ್ತು ಇವುಳೇ ಸಂಗಮ್ಮ ಎಂದು ಗುರುತಿಸಲು. ಇನ್ನೂ ಸಂಗಮ್ಮ ಜನುಮದ ದಿನುವೇ ಅವುಳ ಗುಡಿಸಲು ಪಕ್ಕವೇ ಒಂದು ಬಾವಿಗೂ ಗುದ್ದಲಿ ಪೂಜೆಯಾಗಿ ಅದುರಗೂಟನ ಬೆಳುದ ಸಂಗಮ್ಮಳ ಹೆಸುರಿಗೆ ಬಾವಿ ಅನ್ನುವ ಅಡ್ಡನಾಮವೂ ಪುಕ್ಕಟೇ ಬಂದು ಊರ್‍ಗೆ ಊರೇ 'ಬಾವಿ ಸಂಗಮ್ಮ' ಅಂದಾಗಲೇ ತನ್ನನ್ನು ನೆಪ್ಪು ಮಾಡಿಕೊಳ್ಳುವಂತಾಗಿದ್ದ ಸಂಗುತಿ ಖುದ್ದು ಸಂಗಮ್ಮಗೇ ಹೊಳೆಯದ ಒಂದು ಒಗುಟಂತಾಗಿತ್ತು.

ರಟ್ಟೆ ಬಲಿಯುತ್ತಲೇ ಅಣೆ-ನಾಕಾಣೆಯ ಕೂಲಿ-ನಾಲಿ ಮಾಡಿ ಸೇರುಸಿದ್ದ ನಾಕಾಸಿನಿಂದ ಆ ವೇಳೆಯಲ್ಲಿ ಬರೋಬ್ಬರಿ ನಾಕ್ಕೂರ್ಗಿ ಹೊಲ ಹಿಡುದಿದ್ದ ಸಂಗಮ್ಮಗೆ ಹೊಲ ಅಂದರೆ ಎಲ್ಲಿಲ್ಲದ ಕಕ್ಕುಲಾತಿ ಇತ್ತು. ಆಸುರಕಿ, ಬ್ಯಾಸುರಕಿ ಇಲ್ಲದೇ ಗಳುಸಿದ್ದ ಕಡುಗೆಂಪು ಮಣ್ಣಿನ ಒಂದೇ ಹಾಸಿನ ಆ ಭೂಮಿಯೇ ತನ್ನ ಕರುಳ ಬಳ್ಳಿಗಳಿಗೆ ಆಸರಾದರೆ ಸಾಕು ಅಂದುಕೊಂಡಿತ್ತು ಸಂಗಮ್ಮ. ಕೈ-ಕಾಲು ನಡುಗುತ್ತ ಮಣ್ಣಿಗೆ ಹೊರುಡುವ ವಯಸ್ಸಲ್ಲೂ 'ಎಪ್ಪಾ ನಾ ಕಟಿಪಿಟಿಯಿಂದ ಗಳಸಿದ ಹೊಲಾನ ಕಳ್ಕೋಬಾಡ್ರಿ. ಬಂಗಾರ್ದಂತ ಮೊಮ್ಮಕ್ಕ ಅದಾವು ಉಳುಸ್ರಿ' ಎಂದು ತಿಳಿ ಹೇಳುತ್ತಿತ್ತು. ಗುಡಿಸಲ ಪಕ್ಕದ ಬಾವಿ ಕಟ್ಟೆಗೆ ಕೂತು ಬದುಕಿನ ಪದುವ ಕಟ್ಟುತ್ತಿತ್ತು.

ಆಸ್ತಿಯು ಗನುಮಕ್ಕಳಿಗೆ ಮಾತ್ರ ಸೇರಬೇಕು ಎನ್ನುವ ಕಾಯಿದೆ ಜಾರಿಯಿದ್ದ ಆ ಹೊತ್ತಿನಲ್ಲಿ, ಒಂದಕುಶರ ಕಲಿಯದ, ಓದುದ ಸಂಗಮ್ಮಳು ತಾನು ಗಳುಸಿದ ಭೂಮಿಯೂ ಬರೀ ಗಂಡು ಮಕ್ಕಳು, ಮೊಮ್ಮಕ್ಕಳಿಗಷ್ಟೇ ಅಲ್ಲ, ಅದು ಹೆಣ್ಣು ಮಕ್ಕಳು, ಮೊಮ್ಮಕ್ಕಳಿಗೂ ಸೇರಬೇಕೆಂದು ಆಗಾಗ ಶರುಣ-ಶರುಣೆಯರಂತೆ ಜೀವತತ್ವ ನುಡಿಯುತ್ತಿತ್ತು. ಇಂತಪ್ಪ ಕಾರುಣವಿಟ್ಟು, ತನ್ನ ಕಿರಿ ಮಗುಳು ಅಕ್ಕವ್ವಳ ಮಗ ಅರ್ಥಾಥ ತನ್ನ ಹೆಣ್ಣು ಮೊಮ್ಮುಗನಾಗಿದ್ದ ಕಿರಿಯ ಮಾರನನ್ನು ಬಹಳಷ್ಟು ದೇಕರೇಖಿ ಮಾಡುತ್ತ, 'ಅಂವಾ ಎಂಟೆತ್ತಿನ ಒಕ್ಕಲುತನ ಮಾಡುವ ಭಂಟನಾಗಬೇಕು' ಎನ್ನುವ ಕನುಸೂ ಕಾಣುತ್ತ ಮಾರನ ಮೇಲು ಒಂದುರ ಮೇಲೊಂದರಂತೆ ಪದುವ ಕಟ್ಟುತ್ತಿದ್ದಳು ಸಂಗಮ್ಮ.

ಮಾರಪ್ಪ ಬಾರೊ, ತಳುವಾರ ಮಾರಪ್ಪ
ಬಾವಿ ಸಂಗಮ್ಮಳ ಮೊಮ್ಮಗ
ಮಾರಪ್ಪ ನೀ...
ಎಂಟೆತ್ತು ಕಟ್ಟೊ ನವ್ವೂಲೂರಾಗ...

ಎಂದು ಜನುಪದುರಂತೆ ಹಾಡುತ್ತಿತ್ತು.

ಹೀಗಿರುವಾಗ ಒಮ್ಮೆ ಆ ಊರ ಸೀಮೆಯಲ್ಲಿ ಯಾವುದೋರು ಜ್ವರುದ ಗಾಳಿ ಬಿಸಿ ಅದು ಬಡುಕಲು ಮೈಯುಳ್ಳ ಮಾರನ ಬೆನ್ನೂ ಬಿದ್ದು, ಸ್ವಂಡಾಸು ಹತ್ತಿ ನಾಕಾರು ತಿಂಗುಳೇ ಉರುಳಿತ್ತು. ಪತ್ರಿಕೆಯಲ್ಲಿ ಜ್ವರುದ ಸುದ್ದಿಯಾಗಿ ವಾರುಕ್ಕೊಂದು ಬಾರಿ ಊರಿಗೆ ಬರುತ್ತಿದ್ದ